10. ಈ ಕಂಟ್ರಾಕ್ಟು ಪ್ರಕಾರ ವೀರನಡಿಯಲು ಒಪ್ಪಿರುತ್ತೇನೆಂದು ಇಜಾರೆದಾರನು ಇಜಾರೆ ಮಂಜೂರಾದ 3 ದಿವಸಗಳೊಳಗಾಗಿ ಮುಚ್ಚಳಿಕೆ ಬರದುಕೊಡಬೇಕು. ಇದಕ್ಕೆ ತಪ್ಪಿದಲ್ಲಿ ಅವನ ಡಿಪಾಜಿಟ್ಟು ಮೊಬಲಗು ಸರಕಾರಕ್ಕೆ ದಂಡವಾಗಿ ಕೇಸು ಕೊಳ್ಳಲ್ಪಡುವದು.

11. ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಮತ್ತು ಅದರ ಮೇಲೆ ಆಗುವ ಲೋಕಲ್ ಸೆಸ್ ಸಹ ಅವನ ದರಖಾಸ್ತು ಮಂಜೂರಾದ ಸಂಗತಿಯನ್ನು ಅವನಿಗೆ ತಿಳಿಯಪಡಿಸಿದ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಪೂರ್ತಿ ಮೊಬಲಗನ್ನು ಪಾವತಿ ಮಾಡತಕ್ಕದ್ದು. ಮೇಲ್ಕಂಡಂತೆ ವಾಯಿದೆ ಒಳಗಾಗಿ ಪಾವತಿ ಮಾಡಲು ತಪ್ಪಿದರೆ ಅವನ ಡಿಪಾಜಿಟ್ಟು ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುತ್ತೆ. ಗುತ್ತಾ ಇಜಾರೆಯನ್ನು ರದ್ದು ಮಾಡಲಾದೀತು. ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನೂ ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ.

12. ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇಜಾರೆದಾರ್ರೆ ರೂಢಿಸಬೇಕು. ಹಾಗೆ ತಮ್ಮ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ ಸಾಹೇಬರವರ ಮಂಜೂರಾತಿಯನ್ನು ಪಡಿಯಬೇಕು. ವರ್ಗರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಜಿಚ್ಚಾಗಿ ಕೆಲವು ತೀರ್ವೆಯನ್ನು ವಸೂಲ್ಮಾಡಲು ಡೆಪ್ಯುಟಿ ಕಮಿಷನರ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

13. ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಮರಗಳ ಮತ್ತು ಸ್ವಂತ ಅವುರಾಯಿಗಳಲ್ಲಿ ದೊರೆಯುವ ಫಲವನ್ನು ರೂಢಿಸಲು ಹಕ್ಕು ಇರುವದಿಲ್ಲ.

14. ಇನಾಂದಾರರ ಸ್ಥಿರಪಟ್ಟ ಹಕ್ಕುದಾರೀ ವಿಷಯದಲ್ಲಿ ಕಂಟ್ರಾಕ್ಟುದಾರರು ಪ್ರವೇಶಿಸತಕ್ಕದ್ದಲ್ಲ.

15. ಕಂಟ್ರಾಕ್ಟುದಾರನ ಅಥವಾ ಅವನಕಡೇ ಆಳುಗಳ ಅಜಾಗ್ರತೆಯಿಂದ ಜಂಗಲಿಗೆ ಬೀಳುವ ಬೆಂಕಿ ಅಪಾಯದಿಂದ ಉಂಟಾಗುವ ನಷ್ಟಕ್ಕೆ ಕಂಟ್ರಾಕ್ಟುದಾರನು ಜವಾಬುದಾರನಾಗಿರುತ್ತಾನೆ.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ಕೋಲಾರ ಡಿಸ್ಟ್ರಿಕ್ಟ್.

ಸ್ ೧೯೦೭ನೆ ಇಸವಿ ಜೂನ್ ತಾರೀಖು 10ರಲ್ಲು ಕೋಲಾರದಲ್ಲಿ ನಡದ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗಿನ ತೀರ್ಮಾನಗಳು

ಹಾಜರು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ಮೆ॥ ಸಿ. ಶ್ರೀಕಂಠೇಶ್ವರ ಐಯ್ಯರವರು, ಪ್ರೆಸಿಡೆಂಟರು.
2. ,, ಹರ್ಸೇಅಲ್ಲಿ ಸಾಹೇಬರವರು, ವೈಸ್ ಪ್ರೆಸಿಡೆಂಟರು.
3. ,, ಕೆ. ಶ್ರೀನಿವಾಸರಾಯರವರು, ಕೋಲಾರ ಸಬ್ ಡಿವೀಜ್ ಅಸಿಸ್ಟೆಂಟ್ ಕಮಿಷನರು.
4. ,, ಜೆ. ಆರಾವಮುಬೈಯ್ಯಂಗಾರ್ರವರು, ಬಿ. ಎ., ಬಿ. ಎಲ್., ಚಿಕ್ಕಬಳ್ಳಾಪುರದ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರು.
5. ,, ನರಸಿಂಗರಾವು ಪೂರ್ಣೈಯ್ಯನವರು, ಮಾಲೂರು ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರು.
6. ,, ಪೊನ್ನ ಸಾಮಿಪಿಳ್ಳೆಯವರು, ಡಿ॥ ವೈದಿಕಲ್ ಮತ್ತು ಸ್ಯಾನಿಟೆರಿ ಆಫಿಸರು.
7. ,, ಕೆ. ಕೃಷ್ಣಯ್ಯಂಗಾರ್ರವರು, ಎಗ್ಸಿಕ್ಯೂಟಿವ್ ಇಂಜನಿಯರ್.
8. ,, ಎಸ್. ಗೋಪಾಲರಾಯರವರು, ಸ್ಕೂಲ್ ಡಿ॥ ಇನ್ಸ್ಪೆಕ್ಟರ್.

ನಾನ್ ಅಫಿಷಿಯಲ್ ಮೆಂಬರುಗಳು.

ಕ್ಲಾಸ್ (ಡಿ)

1. ಮೆ॥ ಮುನಿನಾರಾಯಣ ಶೆಟ್ಟಿಯವರು, ಕೋಲಾರ.
2. ,, ರಾಮರಾಪುರವರು, ಮಾಲೂರು.
3. ,, ದೊಂತಿ ಚಿಕ್ಕ ಸುಬ್ಬಾಯಪ್ಪನವರು, ಶಿಡ್ಲಘಟ್ಟ.
4. ,, ಚಾಂಡರಡ್ಡಿಯವರು, ಚಿಂತಾಮಣಿ.
5. ,, ಉಮ್ಮಂಗೈಯ್ಯನವರು, ಬವರಿಂಗಪೇಟೆ.
6. ,, ಕಾಸ್ತಿ ಹೈದರಸಾಹೇಬರವರು, ಮುಳಬಾಗಲು.
7. ,, ಮಹಮದ್‌ಹರ್ಸೆಸಾಹೇಬರವರು, ಶ್ರೀನಿವಾಸಪುರ.
8. ,, ಲಕ್ಷ್ಮಣರಾಯರವರು, ಗುಡಿಬಂಡೆ.
9. ,, ರಾಮಣ್ಣನವರು, ಗೌರಿಬಿದನೂರು.
10. ,, ನಾರಾಯಣಸಾಮಿ ಶೆಟ್ಟಿಯವರು, ಚಿಕ್ಕಬಳ್ಳಾಪುರ.

ಕ್ಲಾಸ್ (ಇ)

11. ಮೆ॥ ಬಸವೆಗೌಡರವರು, ಬವರಿಂಗಪೇಟೆ.
12. ,, ವೆಂಕಟಸಾಮಿರಡ್ಡಿಯವರು, ಶ್ರೀನಿವಾಸಪುರ.
13. ,, ಅಪ್ಪಾಜಿರಡ್ಡಿಯವರು, ಚಿಂತಾಮಣಿ.
14. ,, ಶ್ರೀನಿವಾಸಾಚಾರ್ಯ, ಶಿಡ್ಲಘಟ್ಟ
15. ,, ಗಾಡಗೆರೆ ಕೃಷ್ಣಾಚಾರ್ಯ, ಗೋರಿಬಿದನೂರು.
16. ,, ವೆಂಕಟರಡ್ಡಿಯವರು, ಬಾಗೇಪಲ್ಲಿ.

ಗೈರ್ ಹಾಜರು.

ನಾ॥ ಅಫಿಷಿಯಲ್ ಮೆಂಬರುಗಳು.

ಕ್ಲಾಜು (ಡಿ)

1. ಮೆ॥ ಶೀನಪ್ಪನವರು ಬಾಗೇಪಲ್ಲಿ.

ಇದರಿಂ ಕಂಪ ಅಮಲ್ದಾರ್ರು ಮತ್ತು ಡೆಪ್ಯುಟಿ ಅಮಲ್ದಾರ್ರು ಸಹಾ ವಿಾಟಿಂಗಿಗೆ ಹಾಜರಾಗಿದ್ದರು.

1. ಮೆ॥ ನಾರಾಯಣರಾಯರು, ಕೋಲಾರ ತಾಲ್ಲೂಕು ಅಮಲ್ದಾರ್ರು.
2. ,, ಓಬೆದುಲ್ಲಾ ಸಾಹೇಬರವರು, ಬವರಿಂಗಪೇಟೆ ತಾಲ್ಲೂಕು ಅಮಲ್ದಾರ್ರು.
3. ,, ಟಿ. ಎಸ್. ರಾಘವಾಚಾರ್ರು, ಚಿಂತಾಮಣಿ ತಾಲ್ಲೂಕು ಅಮಲ್ದಾರ್ರು.
4. ,, ವೈ. ನರಸಿಂಗರಾಯರು, ಶ್ರೀನಿವಾಸಪುರ ತಾಲ್ಲೂಕು ಅಮಲ್ದಾರ್ರು.
5. ,, ಎಂ. ಎಸ್. ಪುಟ್ಟಣ್ಣನವರು, ಮುಳಬಾಗಿಲ ತಾಲ್ಲೂಕು ಅಮಲ್ದಾರ್ರು.
6. ,, ಜಿ. ನಾರಾಯಣರಾಯರು, ಶಿಡ್ಲಘಟ್ಟ ತಾಲ್ಲೂಕು ಅಮಲ್ದಾರ್ರು.
7. ,, ಶಾಮರಾಯರು, ಚಿಕ್ಕಬಳ್ಳಾಪುರ ತಾಲ್ಲೂಕು ಅಮಲ್ದಾರ್ರು.
8. ,, ಜಿ. ಹನುಮಂತರಾಯರು, ಗೋರಿಬಿದನೂರು ತಾಲ್ಲೂಕು ಅಮಲ್ದಾರ್ರು.
9. ,, ವಿ. ಗೋಪಾಲರಾಯರು, ಬಾಗೇಪಲ್ಲಿ ತಾಲ್ಲೂಕು ಅಮಲ್ದಾರ್ರು.
10. ,, ಟಿ. ಸುಬ್ಬರಾಯರು, ಮಾಲೂರು ತಾಲ್ಲೂಕು ಅಮಲ್ದಾರ್ರು.
11. ,, ಅನಂತರಾವೈಯ್ಯಂಗಾರ್ರು, ಗುಡಿಬಂಡೆ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ರು.

1907ನೆ ಮಾರ್ಚಿ 23ನೆ ತಾರೀಖಿನಲ್ಲಿ ನಡದ ಡಿಸ್ಟ್ರಿಕ್ಟ್ ಬೋರ್ಡು ವಿಾಟಿಂಗಿನ ಪ್ರೊಸೀಡಿಂಗ್ಸು ಓದಿ ನಿರ್ಧರಿಸಲ್ಪಟ್ಟಿತು.

ಕಂಟ್ರೋಲರ್ ಸಾಹೇಬರವರಿಂದ ಆಡಿಟ್ ಆಗಿ ಬಂದ 1906ನೆ ನವಂಬರು, ಡಿಸೆಂಬರ್ ಮಾಹೆಗಳ ಮತ್ತು 1907ನೆ ಜನವರಿ ಮಾಹೆಯ ಜಮಾಖರ್ಚು ಲೆಕ್ಕಗಳು ಓದಿ ರಿಕಾರ್ಡು ಮಾಡಲ್ಪಟ್ಟಿತು.

3. ಶಿವಮೊಗ್ಗ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟು ಸಾಹೇಬರವರು ದನಗಳ ಪ್ರದರ್ಶನೆಯಲ್ಲಿ ಬಹುಮಾನ ಹೊಂದಿದವರಿಗೆ ಕೊಡತಕ್ಕ ಸರ್ಟಿಫಿಕೇಟು ನಮೂನೆಯನ್ನು ತಿಳುವಳಿಕೆ ಬಗ್ಯೆ ಕಳುಹಿಸಿರುವದಾಗಿ ಜನರಲ್ ಮತ್ತು ರವಿನ್ಯೂ ಸೆಕ್ರೆಟರಿ ಸಾಹೇಬರವರ 24—4—1907ನೆ ಮುಕ್ತಂ 9781-7-L. B. 320-06ನೆ ನಂಬರು ಡಾಕೆಟ್ಟು ಬಡನೆ ಬಂದದ್ದನ್ನ ಓದಿ ರಿಕಾರ್ಡು ಮಾಡಿದ್ದಲ್ಲದೆ ಈ ಡಿಸ್ಟ್ರಿಕ್ಟಿನಲ್ಲಿ ಇಂಥಾ ಸಂದರ್ಭಗಳಲ್ಲಿ ಉಪಯೋಗಿಸುತ್ತಿರುವ ಫಾರಮನ್ನು ಗವರ್ನ್ಮೆಂಟನವರ ತಿಳುವಳಿಕೆಗಾಗಿ ಕಳುಹಿಸಬೇಕೆಂತಾ ತೀರ್ಮಾನವಾಯಿತು.

4. ಕಲ್ಲು ಅಥವಾ ಹೆಂಚು ನೆಲಕ್ಕೆ ಹಾಸಬೇಕಾಗಿರುವ ಆಸ್ಪತ್ರೆ ಮತ್ತು ವೈದ್ಯಶಾಲೆಗಳ ಹೆಸರು ಇದಕ್ಕೆ ತಗುಲಬಹುದಾದ ಖರ್ಚು ತೋರಿಸುವ ತಖ್ತೆಯ ನಕಲನ್ನು ಆಲೋಚನೆ ಬಗ್ಯೆ ಮತ್ತು ಬೋರ್ಡು ರೆಜಲ್ಯೂಷ್ಯ ಕಾಪಿ ಕಳುಹಿಸತಕ್ಕ ಬಗ್ಯೆ ತಲ್ಪಿರುವ 27—4—1907ನೆ ಮುಕ್ತಂ 9952-61—Med. 133-06—4ನೆ ನಂಬರು ಗವರ್ನ್ಮೆಂಟು ಪ್ರೊಸೀಡಿಂಗ್ಸು ಓದಲಾಯಿತು.

1907—08ನೆ ಸಾಲು ಬಜ್ಜೆಟ್ಟಿನಲ್ಲಿ IX contribution ಬಾಬಿಗೆ ದಾಖಲಾಗಿರುವ ರೂ. 1,500 ಪೈಕಿ ಈ ಮೊಬಲಗು ಖರ್ಚು ಮಾಡಬಹುದೆಂದು ತೀರ್ಮಾನವಾಯಿತು.

5. ಗ್ರಾಮಗಳನ್ನು ಒಳ್ಳೇ ಪಾಕೀಜಾ ಸ್ಥಿತಿಯಲ್ಲಿ ಇಡತಕ್ಕ ಪಟೇಲರುಗಳಿಗೆ ಬಹುಮಾನ ಕೊಡತಕ್ಕದ್ದಕ್ಕೆ ಜೇಕಾದ ಮೊಬಲಗನ್ನು 1908—09ನೆ ಸಾಲು ಬಜ್ಜೆಟ್ಟಿನಲ್ಲಿ ಸೇರಿಸಬೇಕೆಂದು 7—5—1907ನೆ ಮುಕ್ತಂ 10397-404—L. B. 353-06—5ನೆ ನಂಬರು ಪ್ರೊಸೀಡಿಂಗ್ಸು ಓದಿ ರಿಕಾರ್ಡು ಮಾಡಲ್ಪಟ್ಟಿತು.

6. 1907—08ನೆ ಸಾಲು ಡಿಸ್ಟ್ರಿಕ್ಟ್ ಫಂಡು ಬಜ್ಜೆಟ್ಟು ಮಂಜೂರು ಮಾಡಿರುವದಾಗಿ ತಲ್ಪಿದ 23—4—1907ನೆ ಮುಕ್ತಂ 9730-40—L. B. 348-06—2ನೆ ನಂಬರ್ ಪ್ರೊಸೀಡಿಂಗ್ಸು ಓದಿ ರಿಕಾರ್ಡು ಮಾಡಲ್ಪಟ್ಟಿತು.

7. ಅವಧಿ ಕಳದಿರತಕ್ಕ ಮೆಂಬರುಗಳ ಬದಲಾಗಿ ಹೊಸ ಮೆಂಬರುಗಳನ್ನು ಚುನಾಯಿಸಲು ಶಿಫಾರಸು ಮಾಡಿ ಕಳುಹಿಸಬೇಕೆಂದು ತಲ್ಪಿದ 13—5—1907ನೆ ಮುಕ್ತಂ 10578-84—L. B. 399-06—1ನೆ ನಂಬರು ಪ್ರೊಸೀಡಿಂಗ್ಸು ಓದಲಾಯಿತು.

ಈ ಸಂಗತಿ ತಾಲ್ಲೂಕು ಬೋರ್ಡಿನಲ್ಲಿ ಚರ್ಚಿಸಿ ತ್ವರ್ಯದಲ್ಲಿ ಮೆಂಬರುಗಳ ತಖ್ತೆ ಕಳುಹಿಸಿ ಕೊಡಬೇಕೆಂದು ತೀರ್ಮಾನವಾಯಿತು.

8. ಹಾಲಿ ಕೆಲಸದಲ್ಲಿರುವ ವರ್ತ್ ಇನ್ಸ್‌ಪೆಕ್ಟರು ಮ್ಯುನಿಸಿಪಲ್ ಟ್ರಸ್ಟಿಯರು ಮತ್ತು ದರೋಗರನ್ನು ಈಚೆಗೆ ಲೋಕಲ್ ಫಂಡು ಬ್ಯಾಂಚಿಗೆ ಮಂಜೂರಾದ ಗುಮಾಸ್ತೇರುಗಳನ್ನಾಗಿ ನೇಮಿಸಿಕೊಳ್ಳಬೇಕೆಂತ ತಲ್ಪಿದ 28—5—1907ನೆ ಮುಕ್ಕಂ 11118-25—L. B. 427-06—2ನೆ ನಂಬರು ಪ್ರೊಸೀಡಿಂಗ್ಸು ಓದಿ ರಿಕಾರ್ಡು ಮಾಡಲ್ಪಟ್ಟಿತು.

9. ದೊಡ್ಡ ಮಳಿಗಳಿಂದ ಕೊಚ್ಚಿ ಕೊಂಡು ಹೋದ ಮುಳಬಾಗಲು-ಗೋರೀಬಿದನೂರು ರೋಡು ರಿಪೇರಿ ಮಾಡಲು 499 ರೂಪಾಯಿನ ಅಂದಾಜು ಮಂಜೂರಿ ವಿಷಯದಲ್ಲಿ ಪುನರಾಲೋಚನೆ ಮಾಡತಕ್ಕ ಬಗ್ಗೆ ವ್ಯಾಪಾರಸ್ಥರಿಗೆ ಉಂಟಾದ ಕುಂದಕವನ್ನು ಪರಿಹರಿಸಲೋಸುಗ ಅಂದಾಜಿನಲ್ಲಿ ದಾಖಲಾಗಿದ್ದ ಕೆಲವೆ ಭಾಗವನ್ನು ಕಮಗಾರಿ ನಿಶ್ಚಿಸಿದ್ದ ಎಂತಲೂ ಬರದಿರುವ ಕೋಲಾರ ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರ 17—4—07ನೆ ಮುಕ್ಕಂ 162ನೆ ನಂಬರು ಡಾಕೆಟ್ಟು ಓದಿ ಮಂಜೂರ್ಮಾಡಲ್ಪಟ್ಟಿತು.

10. ಮಂಜೂರಿ ಬಗ್ಗೆ 46 ರೂಪಾಯಿನ Supplemental re-appropriation ತಕ್ತೆ ಕಳುಹಿಸಿರುವದಾಗಿ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರಿಂದ 4—5—1907ನೆ ಮುಕ್ಕಂ 186ನೆ ನಂಬರು ಡಾಕೆಟ್ಟು ಓದಿ ಮಂಜೂರ್ಮಾಡಲ್ಪಟ್ಟಿತು.

11. ಚಿಕ್ಕಬಳ್ಳಾಪುರದ ತಾಲ್ಲೂಕು ಆರೂರು ಗ್ರಾಮದ ಬಳಿ ಹಾಲಿ ಪೋಲೀಸು ಲೈನಿಗೆ ಉಪಯೋಗಿಸಿಕೊಳ್ಳುತ್ತಿರುವ ಹಳೇ ಅಂಚೇಮನೆ ರಿಪೇರಿಗೆ ತಗ್ಗಲುವ ಅರ್ಧ ಖರ್ಚನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಕೊಡುವ ಪಕ್ಷದಲ್ಲಿ ಬಾಕಿ ಅರ್ಧ ವೊಬಲಗನ್ನು ಪೋಲೀಸು ಫಂಡ್ಸಿನಿಂದ ಕೊಡುವದಾಗಿ ಪೋಲೀಸು ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ 6—5—07ನೆ ಮುಕ್ಕಂ 7847—Mis 1051ನೆ ನಂಬರು ಲೆಟರು ಓದಲಾಯಿತು.

ಈ ವಿಷಯದಲ್ಲಿ ತಾಲ್ಲೂಕು ಬೋರ್ಡಿನವರ ಅಭಿಪ್ರಾಯವನ್ನು ತಂಸಿಕೊಳ್ಳಬೇಕೆಂದು ತೀರ್ಮಾನವಾಯಿತು.

12. ನಂದಿ ಜಾತ್ರೇಲಿ ದನಗಳ ಪ್ರದರ್ಶನಕ್ಕಾಗಿ ಬಂದಿದ್ದ ಆತ್ಯುತ್ತಮವಾದ ದನಗಳಿಗೆ ಬಹುಮಾನವಾಗಿ ಕೊಡಬೇಕಾದ ವೊಬಲಗು 210 ರೂಪಾಯಿಗೆ ಬಂದು ಬಿಲ್ಲು ಇದೇ ಸಂಬಂಧದಲ್ಲಿ ಕಂಟಿಜಂಟಾಗಿ ಖರ್ಚು ಬಿದ್ದಿರುವ 30 ರೂಪಾಯಿಗಳು ಮಂಜೂರಾಗಬೇಕೆಂದು ಚಿಕ್ಕಬಳ್ಳಾಪುರದ ಸಬ್ ಡಿವಿಜ್ ಆಫಿಸರವರ 21—3—1907ನೆ ಮುಕ್ಕಂ 1069ನೆ ನಂಬರು ಓದಿ ಮಂಜೂರ್ಮಾಡಲ್ಪಟ್ಟಿತು.

13. ಮಂಡಿಕಲ್ಲು ಮುನಾಫರಖಾನೆಗೆ ಬಡ್ಜೆಟ್ಟಿನಲ್ಲಿ 100 ರೂಪಾಯಿಗಳು ಮಾತ್ರ ಪ್ರೊವೈಡು ಆಗಿರುವದ್ದರಿಂದಲೂ ಜಾಸ್ತಿ 50 ರೂಪಾಯಿಗಳು ರಾಳಹಳ್ಳಿ ಭಾವಿ ಕಾಂಗಾರಿ ಪೂರೈಸಬೇಕಾದರೆ 9 ಅಡಿ ಆಳದಲ್ಲಿಯೇ ಬಂಡೆ ಬಿದ್ದಿರುವದ್ದರಿಂದ ಹಾಲಿ ಮಂಜೂರಾಗಿರುವ 80 ರೂಪಾಯಿ ಅಲ್ಲದೆ ಜಾಸ್ತಿ 300 ರೂಪಾಯಿ ಬೇಕಾಗಿರುವದ್ದರಿಂದಲೂ ಈ ವೊಬಲಗನ್ನು ಈ ಕೆಲಸಕ್ಕೆ ಉಪಯೋಗಿಸಿಕೊಂಡು ಬಟ್ಟು 150 ರೂಪಾಯಿನ ಅಂದಾಜು ಮಂಜೂರ್ಮಾಡಬೇಕೆಂದು ಚಿಕ್ಕಬಳ್ಳಾಪುರದ ಸಬ್ ಡಿವಿಜ್ ಆಫಿಸರವರ 22—3—07ನೆ ಮುಕ್ಕಂ 1077ನೆ ನಂಬರು ಯಾದಿ ಓದಿ ಮಂಜೂರ್ಮಾಡಲ್ಪಟ್ಟಿತು.

14. ಜಂಗನಕೋಟೆ ಗ್ರಾಮದ ಜಾಡಮಾಲಿ ತಲಬು 4 ರೂಪಾಯಿಯಿಂದ 5 ರೂಪಾಯಿಗೆ ಬಡ್ತಿ ಮಾಡತಕ್ಕ ವಿಷಯದಲ್ಲಿ ತಾಲ್ಲೂಕು ಬೋರ್ಡು ರೆಜಲ್ಯೂಷ್ಯ ಪುನರಾಲೋಚನೆ ಬಗ್ಗೆ ಕಳುಹಿಸಿರುವದಾಗಿ ಚಿಕ್ಕಬಳ್ಳಾಪುರದ ಸಬ್ ಡಿವಿಜ್ ಆಫಿಸರವರ 18—3—07ನೆ ಮುಕ್ಕಂ 1058ನೆ ನಂಬರು ಯಾದಿ ಓದಿ ಮಂಜೂರ್ಮಾಡಲ್ಪಟ್ಟಿತು.

15. ನಂಬಿಹಳ್ಳಿ ಮುನಾಫರಖಾನೆ ಜಾಡಮಾಲಿ ತಲಬು 2 ರೂಪಾಯಿಂದ 3 ರೂಪಾಯಿಗೆ ಬಡ್ತಿ ಮಾಡತಕ್ಕ ವಿಷಯದಲ್ಲಿ ಶ್ರೀನಿವಾಸಪುರತಾಲ್ಲೂಕು ಬೋರ್ಡು ರೆಜಲ್ಯೂಷ್ಯ ಕಾಪಿಯನ್ನು ಮಂಜೂರಿ ಬಗ್ಗೆ ಕಳುಹಿಸಿದೆ ಎಂದು ಕೋಲಾರ ತಾಲ್ಲೂಕು ಸಬ್ ಡಿವಿಜ್ ಸಾಹೇಬರವರ 31—3—07ನೆ ಮುಕ್ಕಂ 1213ನೆ ನಂಬರು ಯಾದಿ ಓದಿ ಮಂಜೂರ್ಮಾಡಲ್ಪಟ್ಟಿತು.

16. ಬೀರ್ಪೀನಹಳ್ಳಿ ಮತ್ತು ಜೀಡೇರಹಳ್ಳಿ ಭಾವಿಗಳಿಗೆ ಮಂಜೂರಾಗಿರತಕ್ಕ ವೊಬಲಗನ್ನು ದಂಡಪಾಳ್ಯ ಕುಂಟೆ ರಿಪೇರಿಗೆ ಉಪಯೋಗಿಸಿಕ್ಕೊಂಡು 499 ರೂಪಾಯಿಗೆ ಅಂದಾಜು ಮಂಜೂರು ಬಗ್ಗೆ ಕಳುಹಿಸಿದೆ ಎಂದು ಬರದಿರತಕ್ಕ ಕೋಲಾರ ಸಬ್ ಡಿವಿಜ್ ಆಫಿಸರವರ 19—4—07ನೆ ಮುಕ್ಕಂ 1321ನೆ ನಂಬರು ಯಾದಿ ಓದಲಾಯಿತು.

ಈ 3 ಕ್ಷಾಂಗಾರಿಗಳ ಆವಶ್ಯಕತೆ ವಿಷಯದಲ್ಲಿ ಬೋರ್ಡಿನಲ್ಲಿ ಜರಿಸಿ ರೆಜಲ್ಯೂಷ್ಯ ಕಾಪಿ ಕಳುಹಿಸಲು ತಾಲ್ಲೂಕು ಬೋರ್ಡಿಗೆ ಈ ಸಂಗತಿ ರಫರಿ ಮಾಡಬೇಕೆಂದು ತೀರ್ಮಾನಿಸಲಾಯಿತು.

17. ತಾಲ್ಲೂಕು ಬೋರ್ಡಿನವರು ರೆಜಲ್ಯೂಷ್ಯ ಮಾಡಿರುವಂತೆ ಮಾಲೂರು ತಾಲ್ಲೂಕು ದಾದೇನಾಯ್ಕನಹಳ್ಳಿ ಗ್ರಾಮದಲ್ಲಿ ವೆಂಕಟಗಿರಿಯಪ್ಪನ ಗೋರಿ ಬಳಿ ಪ್ರತಿ ಸೋಮವಾರ ಸಂತೆ ನಡಿಯುತಕ್ಕ ವಿಷಯದಲ್ಲಿ ಮಂಜೂರ್ಮಾಡಬೇಕೆಂದು ಮಾಲೂರು ಡಿವಿಜ್ ಅಸಿಸ್ಟೆಂಟ್ ಕಮ್ಮಿಷನರ್ ಸಾಹೇಬರವರ 1552ನೆ ನಂಬರು ಯಾದಿ ಓದಲಾಯಿತು.

ಅವಶ್ಯಕವಾದ ತಪ್ಪುಗಳು ತಿದ್ದುಕೊಂಡ ನಂತರ ತಾಲ್ಲೂಕು ಬೋರ್ಡಿನವರ ತೀರ್ಮಾನಕ್ಕೆ ಇಡಬೇಕೆಂತ ತೀರ್ಮಾನಿಸಲಾಯಿತು.

18. ಬವರಿಂಗ್‌ಪೇಟೆಯಿಂದ ಟ್ಯಾಂಕಲ್ಲಿಗೆ ಹೋಗುವ ಬಂಡೀ ಜಾಡಾ ರಿಪೇರಿಗೆ 200 ರೂಪಾಯಿ ಅಂದಾಜು ಮಂಜೂರ್ಮಾಡಬೇಕೆಂದು ಮಾಲೂರು ಸಬ್ ಡಿವಿಜ್ ಆಫಿಸರವರ 18—4—07ನೆ ಮುಕ್ಕಂ 1562ನೆ ನಂಬರು ಯಾದಿ ಓದಿ ಮಂಜೂರ್ಮಾಡಲ್ಪಟ್ಟಿತು.

19. ಟ್ಯಾಂಕಲು ಮುನಾಫರ್ಖಾನೆ ರಿಪೇರಿಗಾಗಿ 110 ರೂಪಾಯಿನ ಅಂದಾಜು ಮಂಜೂರ್ಮಾಡಬೇಕೆಂತ ಮಾಲೂರು ತಾಲ್ಲೂಕು ಅಮಲ್ದಾರ್ರು 12—4—07ನೆ ಮುಕ್ಕಂ 644ನೆ ನಂಬರು ರಿಪೋರ್ಟು ಓದಲಾಯಿತು. ನಂಗ್ಲಿ ಮುನಾಫರ್ಖಾನೆಗೆ ಪ್ರೊವೈಡಾಗಿರುವ 450 ರೂಪಾಯಿ ಪೈಕಿ ಈ ವೊಬಲಗು ಖರ್ಚು ಬೀಳಬೇಕೆಂದು ತೀರ್ಮಾನವಾಯಿತು.

20. ಕೋಲಾರ ತಾಲ್ಲೂಕು ವಕ್ಕಲೇರಿ ಗ್ರಾಮವನ್ನು "Union Panchayet" ಆಗಿ ಮಾಡಲು ಕೋಲಾರ ಸಬ್ ಡಿವಿಜ್ ಆಫಿಸರವರ 5—6—07ನೆ ಮುಕ್ಕಂ 1603ನೆ ನಂಬರು ಯಾದಿ ಓದಲಾಯಿತು.

ಈ ಸಂಗತಿ ಗವರ್ನಮೆಂಟಿಗೆ ರಿಫರ್ ಮಾಡಬೇಕೆಂದು ತೀರ್ಮಾನಿಸಲಾಯಿತು.

21. 400 ರೂಪಾಯಿಗೆ ಡಿಸ್ಪೆನ್ಸರಿ ಬೋರ್ಡ್ ಆಫೀಸು ಉಪಯೋಗಕ್ಕಾಗಿ ಬಂದು "ಟೈಪು ರೈಟರು" ಕೊಂಡುಕೊಳ್ಳ ತಕ್ಕ ವಿಷಯದಲ್ಲಿ ಡಿಸ್ಪೆನ್ಸರಿ ಬೋರ್ಡು ರೆಜಲ್ಯೂಷ್ಯನ್ ಕಾಪಿ ಕಳುಹಿಸಬೇಕೆಂದು ಬರದಿರುವ 7-5-07ನೆ ಮುಕ್ತಂ 10407-L. B. 421-6-2ನೆ ನಂಬರು ಸೆಕ್ರಿಟರಿ ಸಾಹೇಬರವರ ಡಾಕೆಟ್ಟು ಓದಲಾಯಿತು.

ಅಂಗೀಕರಿಸಲ್ಪಟ್ಟಿತು.

22. ದಸರಾ Representative Assembly ಗೆ ಹೋಗಲು ಇಬ್ಬರು Non-Official ಮೆಂಬರುಗಳನ್ನು ಚುನಾಯಿಸಬೇಕೆಂದು ಕೋಲಾರ ಡಿಸ್ಪೆನ್ಸರಿ ಡೆಪ್ಯೂಟಿ ಕಮ್ಮಿಷನರ್ ಸಾಹೇಬರವರ 5-6-07ನೆ ಮುಕ್ತಂ 8369ನೆ ನಂಬರು ಡಾಕೆಟ್ ಓದಲಾಯಿತು.

ಆನು|| ರಾ|| ಗುಡಿಬಂಡೆ ಲಕ್ಷ್ಮಣರಾಯರು, ಚಿಕ್ಕಬಳ್ಳಾಪುರ ನಾರಾಯಣಸ್ವಾಮಿಶೆಟ್ಟರವರು ಈ ಇಬ್ಬರನ್ನೂ ಚುನಾಯಿಸಬಹುದೆಂದು ತೀರ್ಮಾನವಾಯಿತು.

23. ದಂಡಗಾನಹಳ್ಳಿ ಭಾವಿ ಕಾಂಗಾರಿಗೆ ಮಂಜೂರಾಗಿರುವ 300 ರೂಪಾಯಿ ಪೈಕಿ ನಾಗಾತಿಹಳ್ಳಿ ಮತ್ತು ಕದರೇನಹಳ್ಳಿಗಳಲ್ಲಿ ಭಾವಿ ಅಗಿಯಲು ಬೇಕಾಗಿರುವ ಜಾಸ್ತಿ ವೊಬಲಗು 289 ರೂಪಾಯಿ ಮಂಜೂರಾಗಬೇಕೆಂದು ಬರದಿರುವ ಗೋರಿಬಿದನೂರು ಆವಿಾಲರ 8-6-07ನೆ ಮುಕ್ತಂ 1206ನೆ ನಂಬರು ರಿಪೋರ್ಟು ಇದರ ಮೇಲೆ ಚಿಕ್ಕಬಳ್ಳಾಪುರದ ಸಬ್ ಡಿವಿಜ್ ಆಫೀಸರವರ ಶಿಫಾರ್ಸು ಓದಿ ಅಂಗೀಕರಿಸಲ್ಪಟ್ಟಿತು.

24. ಹೊಸ ಹೂಳ್ಯ ಭಾವಿಗೆ ಮಂಜೂರಾಗಿರುವ ವೊಬಲಗು ಪೈಕಿ ನಲ್ಲಚೆರವು ಮುಸಾಫರಖಾನೆ ರಿಪೇರಿಗೆ 210 ರೂಪಾಯಿ ವರ್ಗಾಯಿಸಬೇಕೆಂದು ಚಿಕ್ಕಬಳ್ಳಾಪುರ ಸಬ್ ಡಿವಿಜ್ ಆಫೀಸರವರ 10-6-07ನೆ ಮುಕ್ತಂನ ಯಾದಿ ಓದಲಾಯಿತು.

ಅಂಗೀಕರಿಸಲ್ಪಟ್ಟಿತು.

25. ಡಿಸ್ಪೆನ್ಸರಿ ಬೋರ್ಡಿನವರು ಮಂಜೂರ್ಮಾಡಿದ 500 ರೂಪಾಯಿಗೆ ಬಳಪಟ್ಟ ಕಾಂಗಾರಿಗಳ ತಖ್ತೆ ಇದರಡಿ ದಾಖಲ್ಮಾಡಿದೆ.

ತಾಲ್ಲೂಕು.	ಕೆಲಸಗಳ ವಿವರ.	ವೊಬ್ಬಲಗು.
		ರೂ.
ಕೋಲಾರ	ಪಾಳಾಗದಕುಂಟೆಯಿಂದ ನೀರು ಎತ್ತಿ ಹಾಕಿ ಹೂಳು ತೆಗಿಯಲು ...	86
	ಡೆಪ್ಯೂಟಿ ಕಮ್ಮಿಷನರ್ ಸಾಹೇಬರವರ ಬಂಗಲೆ ಬಳಿ ಭಾವಿಯಲ್ಲಿ ಹೂಳು ತೆಗಿಯಲು.	16
ಬವರಿಂಗ್‌ಪೇಟೆ ...	ಬವರಿಂಗಪೇಟೆಯಿಂದ ಟ್ಯಾಕ್ಸಲ್ಲಿಗೆ ಬಂಡಿ ಜಾಡಾ ರಿಪೇರಿ ಮಾಡಲು ...	200
ಮುಳಬಾಗಲು	ಗಜೂಗಾಂಡ್ಲಪ್ಪ ಹೂಳು ತೆಗೆಯಲು	224
	ಟೆಂಗಿನಭಾವಿಯಲ್ಲಿ ಹೂಳು ತೆಗೆಯಲು	128
	ಯಮ್ಮೆನೂರು ಬಳಿ ಭಾವಿ ಅಗಿಯಲು	208
	ಮೆಂಡಿಕಲ್ಲು ಡಿಟೋ	169
ಚಿಕ್ಕಬಳ್ಳಾಪುರ	ಮುಂಡಿಕಲ್ಲು ಮುಸಾಫರಖಾನೆ ಅಭಿವೃದ್ಧಿಪಡಿಸಲು ...	150
ಬಾಗೇಪಲ್ಲಿ	ನಲ್ಲಚೆರವು ಮುಸಾಫರಖಾನೆ ಅಭಿವೃದ್ಧಿಪಡಿಸಲು	210
	ಗುಟ್ಟಪಲ್ಲಿಯಿಂದ ಚೇಳೂರು ರಸ್ತೆ ಚಾಕವೇಲುವರಗೆ ಒಡಾಯಿಸಲು ..	200
ಗುಡಿಬಂಡೆ	ಬೀಚಗಾನಹಳ್ಳಿ ಭಾವಿ ಆಳಪಡಿಸಲು	36
ಗೌರಿಬಿದನೂರು	ನಾಗಾತಿಹಳ್ಳಿಲಿ ಭಾವಿ ಅಗಿಯಲು ...	166
	ಕದರೇನಹಳ್ಳಿ ಡಿಟೋ	73
ಶಿಡ್ಲಘಟ್ಟ ...	ಗೆಂಜಿಗುಂಟೆ ಮುಸಾಫರ್ಖಾನೆ ರಿಪೇರಿಗೆ	100
ಶ್ರೀನಿವಾಸಪುರ ...	ಕಂಬಾಲಪಲ್ಲಿ ಕುಂಟೆ ರಿಪೇರಿಗಾಗಿ	200

ಇದರಡಿ ಕಂಡ ತಾಲ್ಲೂಕು ಬೋರ್ಡು ಪ್ರೊಸೀಡಿಂಗ್ಸುಗಳು ಓದಿ ರಿಕಾರ್ಡು ಮಾಡಲ್ಪಟ್ಟವು.

ನಂಬರು.	ತಾಲ್ಲೂಕು ಬೋರ್ಡು.	ತಾರೀಖು.
1	ಕೋಲಾರ	16-5-07
2	ಬವರಿಂಗಪೇಟೆ	18-5-07
3	ಚಿಂತಾಮಣಿ	9-4-07
4	ಶ್ರೀನಿವಾಸಪುರ	20-5-07
5	ಮುಳಬಾಗಲು	22-5-07
6	ಶಿಡ್ಲಘಟ್ಟ	24-4-07
7	ಚಿಕ್ಕಬಳ್ಳಾಪುರ	30-4-07
8	ಬಾಗೇಪಲ್ಲಿ	20-5-07
9	ಗುಡಿಬಂಡೆ	16-4-07
10	ಮಾಲೂರು	30-5-07

27. ಮುಂದಿನ ವಿಾಟಂಗು 4-9-07ನೆ ತಾರೀಖಿನಲ್ಲಿ ನಡೆಯಬೇಕೆಂದು ತೀರ್ಮಾನಿಸಲ್ಪಟ್ಟಿತು.

ಸಿ. ಶ್ರೀಕಂಠೇಶ್ವರ ಐಯ್ಯರ್,
ಪ್ರೆಸಿಡೆಂಟ್, ಡಿಸ್ಪೆನ್ಸರಿ ಫಂಡು ಬೋರ್ಡ್.